# ಆಹಾ ಸುದ್ದಿ!

★ ಸಸಿತೋಟ



ಚೀನಾದ ಚಾಂಗ್‌ಶಾನಲ್ಲಿ ಚಳಿಯನ್ನು ತಾಳಿಕೊಳ್ಳುವ ಪರೀಕ್ಷೆ ನಡೆಯಿತು. ಒಂದು ಮೀಟರ್ ದಪ್ಪನಾದ ಮಂಜುಗಡ್ಡೆಯ ಮಧ್ಯೆ 48 ಗಂಟೆಗಳ ಕಾಲ ಊಟ, ನೀರಿಲ್ಲದೇ ಕುಳಿತುಕೊಂಡವರು ಮುಂದೆ ದಾಖಲೆ ವೀರರು ಎಂದು ಬೀಗಬಹುದು ಎಂಬುದು ಸ್ಪರ್ಧೆ ಆಯೋಜಿಸಿದವರ ಆಮಿಷವಾಗಿತ್ತು. ಭಾಗವಹಿಸಿದ ನಾಲ್ವರಲ್ಲಿ ಮೂವರು ವೀರರಾಗಿ ಹೊರಹೊಮ್ಮಿದ್ದಾರೆ. ಹಿಮಾಲಯದ ಕಡೆಯಿಂದ ಭಾರತದೊಳಕ್ಕೆ ನುಗ್ಗಲು ಮತ್ತೆ ಮೂವರು ಚೀನಿಯರು ತಯಾರಾದಂತಾಗಿದೆ.

ಅಮೆರಿಕಾದ ವಾಷಿಂಗ್ಟನ್‌ನಲ್ಲಿ ಯುವತಿಯೊಬ್ಬಳ ಮನೆಗೆ ನುಗ್ಗಿದ ಕಳ್ಳರು ಆಕೆಯ ಉಡುಪುಗಳನ್ನೆಲ್ಲ ಕದ್ದುಕೊಂಡು ಹೋದರು. ಮರುದಿನ ಯುವತಿ ತನ್ನ ಗೆಳೆಯನೊಂದಿಗೆ ಉಪಾಹಾರಗೃಹವೊಂದಕ್ಕೆ ಹೋಗಿ ದುಃಖ ತೋಡಿಕೊಳ್ಳುತ್ತ ಕುಳಿತಳು. ಕಣ್ಣೀರೊರೆಸಿಕೊಂಡು ನೋಡಿದರೆ ಆಕೆಯದೇ ಉಡುಪು ತೊಟ್ಟ ಇನ್ನೊಬ್ಬಳು ಯುವತಿ ಎದುರು ಟೇಬಲ್‌ನಲ್ಲಿ ಕೂರಬೇಕೆ! ಕಳ್ಳಿ ಇಷ್ಟು ಸುಲಭವಾಗಿ ಸಿಗುತ್ತಾಳೆಂದರೆ ಮತ್ತೆ ಮತ್ತೆ ಕಳುವಾದರೂ ಚಿಂತೆಯಿಲ್ಲ!

ರಷ್ಯಾದ ಸೋಚಿಯಲ್ಲಿ ನಡೆಯಲಿರುವ ಒಲಿಂಪಿಕ್ಸ್‌ಗಾಗಿ ಕ್ರೀಡಾಂಗಣದಲ್ಲಿ ಕಟ್ಟಿರುವ ಶೌಚಾಲಯಗಳಿವು. ಒಂದೇ ಕೊಠಡಿಯಲ್ಲಿ ಎರಡು ಶೌಚಾಲಯಗಳಿದ್ದು, ಒಬ್ಬರೇ ಏಕಕಾಲಕ್ಕೆ ಎರಡನ್ನೂ ಬಳಸಲು ಸಾಧ್ಯವಿಲ್ಲ. ಹಾಗಂತ ಇಬ್ಬರು ಒಂದೇ ಬಾರಿ ಬಳಸಲು ಸಾಧ್ಯವೆ? ಕಟ್ಟಿರುವ ಪರಿ ನೋಡಿದರೆ ಬಳಸಲೇಬೇಕು ಎಂಬ ಇರಾದೆ ಇರುವಂತಿದೆ. ಶೌಚಾಲಯ ಪ್ರವೇಶಿಸುವಾಗಲೇ ಕಣ್ಣಿಗೆ ಪಟ್ಟಿ, ಮೂಗಿಗೆ ಗವುಸು ಪೂರೈಸಿದರೆ ಅಡ್ಡಿಯಿಲ್ಲ.





ಕಳೆದ ವಾರ ಅಮೆರಿಕಾದ ಕೆಲವು ಭಾಗಗಳಲ್ಲಿ ತೀವ್ರ ಹಿಮಪಾತವಾಗಿ ಧ್ರುವ ಪ್ರದೇಶದಂತಾಗಿದ್ದವು. ಆಗ ಮೂಲ 'ನಗ್ನ ಕೌಬಾಯ್' ಎಂದು ಹೇಳಿಕೊಳ್ಳುವ ರಾಬರ್ಟ್ ಬರ್ಕ್ ನ್ಯೂಯಾರ್ಕ್‌ನ ಬೀದಿಯಲ್ಲಿ ಸಂಗೀತದ ಮೂಲಕ ಜನರನ್ನು ರಂಜಿಸಿದ. ರೋಮ್ ಹೊತ್ತಿ ಉರಿಯುವಾಗ ಪಿಟೀಲು ಹಿಡಿದು ಕೂತ ನೀರೋ ಈ ಕೌಬಾಯ್ ಆದರ್ಶ ಇರಬಹುದು.

ಜರ್ಮನಿಯಲ್ಲಿ ನಗ್ನರಾಗಿ ಚಾರಣ ಮಾಡುವ ಆಸೆಯಿಂದ ಹಲವರು ನಗರಾಡಳಿತಕ್ಕೆ ಕಳೆದ ವರ್ಷವೇ ಅರ್ಜಿ ಸಲ್ಲಿಸಿದ್ದಾರಂತೆ. ಈಗ ನಗ್ನ ಚಾರಣದ ಮಾರ್ಗ ನಿಗದಿಪಡಿಸುವುದು ನಗರಾಡಳಿತಕ್ಕೆ ತಲೆನೋವಾಗಿದೆ. ಯಾವ ಮಾರ್ಗ ಹುಡುಕಿದರೂ ಉಡುಪು ತೊಟ್ಟವರು ಕಾಣಿಸಿಕೊಂಡರೆ ಎಂಬ ಚಿಂತೆ. ಹೀಗಾಗಿ 2015ರವರೆಗೂ ಇದು ಸಾಧ್ಯವಾಗಲಿಕ್ಕಿಲ್ಲ ಎಂದು ಆಡಳಿತಕ್ಕೆ ಆತಂಕವಾಗಿದೆಯಂತೆ. ಎಷ್ಟು ಮುಖ್ಯವಾದ ಯೋಜನೆ ಹೀಗೆ ನನೆಗುದಿಗೆ ಬಿದ್ದರೆ ಹೇಗೆ?



ಚೀನಾದ ಈ ವ್ಯಕ್ತಿ ಲಿನ್ 7-8 ಗಂಟೆಗಳ ಕಾಲ ತನ್ನ ಗೆಳತಿಯನ್ನು ಒತ್ತೆಯಾಳಾಗಿ ಇಟ್ಟುಕೊಂಡ. ಅದೂ ಕಟ್ಟಡವೊಂದರ ಮೇಲೆ. ಮದುವೆಗೆ ಎರಡೂ ಕುಟುಂಬಗಳನ್ನು ಒಪ್ಪಿಸಲು ಈ ನಾಟಕ ನಡೆಯಿತಂತೆ. ಕೊನೆಗೆ ಪೊಲೀಸರು ಬಂದರು. ನಮ್ಮಲ್ಲಾದರೆ ಠಾಣೆಗೆ ಒಯ್ದು ಜೋಡಿಗೆ ಅಕ್ಷತೆ ಹಾಕಿ ಕಳುಹಿಸುತ್ತಿದ್ದರು. ಆದರೆ ಅಲ್ಲಿ ಹುಡುಗ ಜೈಲಲ್ಲಿ ವಿರಹ ಗೀತೆ ಹಾಡುತ್ತ ಕುಳಿತಿದ್ದಾನಂತೆ, ಹೊರಗಾದರೂ ಇದ್ದಿದ್ದರೆ ಪ್ರೇಮಗೀತೆಯನ್ನು ಕದ್ದು ಮುಚ್ಚಾದರೂ ಹಾಡಬಹುದಿತ್ತು ಎಂದು ಚಿಂತಿಸುತ್ತ.